ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:-ಎಡಿಎಂ2(1)ಸಕಾಲ-01/2018-19 ದಿನಾಂಕ:-27-10-2018

### ಜ್ಞಾಪನ

ವಿಷಯ:-ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರಡಿಯಲ್ಲಿ ನಾಗರಿಕರಿಗೆ ನಿಗದಿತ ಅವಧಿಯಲ್ಲಿ ಸಕಾಲ ಸೇವೆಗಳನ್ನು ಕಡ್ಡಾಯವಾಗಿ ONLINE ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಮತ್ತು ಸಕಾಲ ಕೋಶಕ್ಕೆ ನೋಡಲ್ ಅಧಿಕಾರಿಗಳನ್ನು ನೇಮಿಸುವ ಬಗ್ಗೆ

ಉಲ್ಲೇಖ:-ಈ ಕಛೇರಿ ಪತ್ರ ಸಮ ಸಂಖ್ಯೆ:ಸಿ8(1)ಶಾ.ಶಿ.ಅ.ಸಕಾಲ-01/2016-17 ದಿ:17-02-2018, ದಿ:24.02.2018, ದಿ:25.04.2018, ದಿ:25.05.2018, ದಿ:04.06.2018.

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂದಿಸಿದಂತೆ, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರಡಿಯಲ್ಲಿ, ನಾಗರಿಕರ ಸಕಾಲ ಸೇವೆಗಳನ್ನು ಕಡ್ಡಾಯವಾಗಿ ONLINE ತಂತ್ರಾಂಶದಲ್ಲಿ ಅಳವಡಿಸಿ ONLINE ನಲ್ಲಿಯೇ ನಿಗದಿತ ಅವಧಿಯೊಳಗೆ ಒದಗಿಸುವ ಬಗ್ಗೆ ಉಲ್ಲೇಖ ಪತ್ರಗಳಲ್ಲಿ ಈಗಾಗಲೇ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರುಗಳಿಗೆ ತಿಳಿಸಲಾಗಿರುತ್ತದೆ. ಆದರೆ ಪ್ರತಿ ನಿತ್ಯ ಸಕಾಲ ವರದಿಗಳನ್ನು ಪರಿಶೀಲಿಸದಾಗ ಸಕಾಲ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳು ನಿಗದಿತ ಅವಧಿಯೊಳಗೆ ಇತ್ಯರ್ಥವಾಗದೇ ಬಾಕಿ ಇರುವುದನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿದೆ. ಆದಾಗ್ಯೂ ಪ್ರತಿನಿತ್ಯ ಸಕಾಲ ಸೇವೆಗಳ ವರದಿಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಗಮನಿಸಿ ಸಂಬಂದಿಸಿದ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ತಿಳಿಸಲಾಗುತ್ತಿದೆಯಾದರೂ ಸಕಾಲ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥ ಪಡಿಸದೇ ಇರುವುದು ಸಂಬಂಧಿಸಿದ ಅಧಿಕಾರಿಗಳ / ನೌಕರರ ಬೇಜವಾಬ್ದಾರಿ ಹಾಗೂ ಕರ್ತವ್ಯ ಲೋಪವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ಕರ್ತವ್ಯ ಲೋಪ ಮತ್ತು ಬೇಜವಾಬ್ದಾರಿಯನ್ನು ಪರಿಗಣಿಸಿ ಇನ್ನು ಮುಂದೆ ಇದೇ ರೀತಿ ಸಕಾಲ ಸೇವೆಯಲ್ಲಿ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಯಾವುದೇ ಮುನ್ಸೂಚನೆಯನ್ನು ನೀಡದೇ ಕರ್ನಾಟಕ ನಾಗರೀಕರಿಗೆ ಸೇವಾ (ವಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ-1957ರ ನಿಯಮ-12ರಡಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದೆ.

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ-2011ನ್ನು ಸಮಗ್ರವಾಗಿ ಅನುಷ್ಠಾನಗೊಳಿಸುವ ಸಂಬಂಧ ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ಆಯುಕ್ತಾಲಯಗಳಲ್ಲಿ ಹಾಗೂ ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗಗಳಲ್ಲಿ ಸಕಾಲ ನೋಡಲ್ ಅಧಿಕಾರಿಗಳನ್ನು ನೇಮಿಸಲು ಉದ್ದೇಶಿಸಿ ಈ ಕೆಳಗಿನಂತೆ ಆದೇಶಿಸಿದೆ.

| ಕ್ರಮ ಸಂಖ್ಯೆ | ಕಾರ್ಯಾಲಯದ ಹೆಸರು | ಸಕಾಲ ನೋಡಲ್ ಅಧಿಕಾರಿಗಳ ಹೆಸರು | ಹುದ್ದೆ |
|---|---|---|---|
| 1 | ಆಯುಕ್ತರ ಕಾರ್ಯಾಲಯ, ಬೆಂಗಳೂರು | ಶ್ರೀಮತಿ ಬಿ.ನಿರ್ಮಲ | ಹಿರಿಯ ಸಹಾಯಕ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತರ ಭಾಷಾ ನಿರ್ದೇಶನಾಲಯ, ಬೆಂಗಳೂರು |

| | | | |
|---|---|---|---|
| 2 | ಧಾರವಾಡ ಆಯುಕ್ತಾಲಯ | ಶ್ರೀ ಡಾ॥ ಬಿ.ಕೆ.ಎಸ್.ವರದನ್ | ಸಹ ನಿರ್ದೇಶಕರು(ಆಡಳಿತ), ಸಾ.ಶಿ.ಇ, ಧಾರವಾಡ ಆಯುಕ್ತಾಲಯ, ಧಾರವಾಡ |
| 3 | ಕಲಬುರಗಿ ಆಯುಕ್ತಾಲಯ | ಶ್ರೀ ಜಿ.ಎಂ.ವಿಜಯಕುಮಾರ್ | ಸಹ ನಿರ್ದೇಶಕರು(ಆಡಳಿತ), (ಹೆಚ್ಚುವರಿ ಪ್ರಭಾರ), ಸಾ.ಶಿ.ಇ, ಕಲಬುರಗಿ ಆಯುಕ್ತಾಲಯ, ಕಲಬುರಗಿ |
| 4 | ಸಹ ನಿರ್ದೇಶಕರು, ಬೆಂಗಳೂರು ವಿಭಾಗ-1, ಬೆಂಗಳೂರು | ಶ್ರೀಮತಿ ಎಸ್. ಗೀತಾ | ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ-1, ಬೆಂಗಳೂರು |
| 5 | ಸಹ ನಿರ್ದೇಶಕರು, ಮೈಸೂರು ವಿಭಾಗ-, ಮೈಸೂರು | ಶ್ರೀ ಪ್ರಭುಸ್ವಾಮಿ | ಸಹ ನಿರ್ದೇಶಕರು(ಆಡಳಿತ) (ಪ್ರಭಾರಿ) ಸಾ.ಶಿ.ಇ, ಮೈಸೂರು ವಿಭಾಗ, ಮೈಸೂರು |

**ಸಕಾಲ ನೋಡಲ್ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು:-**

1. ಸಕಾಲ ಸೇವೆಗಳಲ್ಲಿ ಅಳವಡಿಸಿರುವ 32 ಸೇವೆಗಳಿಗೆ ಸಂಬಂಧಿಸಿದಂತೆ ತಮ್ಮ ಕಛೇರಿ ವ್ಯಾಪ್ತಿಗೆ ಬರುವ ಅರ್ಜಿಗಳನ್ನು ಸಕಾಲ ONLINE ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಕ್ರಮವಹಿಸುವುದು.

2. ಪ್ರತಿನಿತ್ಯ ಸಕಾಲ ಸೇವೆಗಳ ಅಧಿನಿಯಮ-2011ರ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ನಿಗಧಿತ ಅವಧಿಗೆ ಮುಂಚೆಯೇ ಅರ್ಜಿಗಳನ್ನು ವಿಲೇವಾರಿ ಮಾಡುವ ಬಗ್ಗೆ ಕ್ರಮವಹಿಸುವುದು.

3. ನಾಗರೀಕರು ಅಪೇಕಿಸಿದಲ್ಲಿ Registered Post / Speed Post ಚಾಲ್ತಿಯಲ್ಲಿರುವ ಸೇವೆಗಳನ್ನು ಸಕಾಲದ ಸೇವೆಗಳನ್ನು "ಡೋರ್ ಡಿಲವರಿ" ಮಾಡಲು 10 ಪುಟಗಳಿಗೆ ಮೀರದಂತಹ ಸಕಾಲ ಸೇವಗಳಿಗೆ ಗರಿಷ್ಠ ರೂ.15 ರೂಗಳನ್ನು ನಿಗಧಿಪಡಿಸಲಾಗಿದೆ. ಅದಕ್ಕಿಂತ ಹೆಚ್ಚಿನ ಪ್ರತಿ / ಮಾಹಿತಿ ದಾಖಲೆಗಳನ್ನು ಸಕಾಲ ಸೇವೆಗಳಲ್ಲಿ ನಾಗರೀಕರು ಕೋರಲು ಅಪೇಕ್ಷಿಸಿದ್ದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಹಾಗೂ ತಿದ್ದುಪಡಿ ಅಧಿನಿಯಮ 2014ರ ಶಡೂಲ್ 7ರನ್ವಯ ಸಕ್ಷಮ ಪ್ರಾಧಿಕಾರವು ಶುಲ್ಕವನ್ನು ನಿಗಧಿಪಡಿಸಿಕೊಂಡು ನಿಗಧಿತ ಅವಧಿಯಲ್ಲಿ ನಾಗರೀಕರಿಗೆ ಸಕಾಲ ಸೇವೆಗಳನ್ನು ಡೋರ್ ಡೆಲಿವರಿ ಮಾಡತಕ್ಕದ್ದು.

4. ಪ್ರತಿನಿತ್ಯ ಸಕಾಲ ವರದಿಗಳನ್ನು ಪರಿಶೀಲಿಸಿ ತಮ್ಮ ಕಛೇರಿ ವ್ಯಾಪ್ತಿಗೆ ಸಂಬಂಧಿಸಿದಂತೆ, ಅರ್ಜಿಗಳು ಬಾಕಿ ಇದ್ದಲ್ಲಿ ತಕ್ಷಣ ಇತ್ಯರ್ಥ ಪಡಿಸಲು ಕ್ರಮವಹಿಸುವುದು. ಹಾಗೂ ಇತ್ಯರ್ಥವಾಗದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಿಗೆ ಆಯಾ ಕಛೇರಿಯ ಅಧಿಕಾರಿ/ ನೌಕರರರಿಗೆ ಕಾರಣ ಕೇಳಿ ನೋಟೀಸ್ ನೀಡಲು ಕ್ರಮವಹಿಸುವುದು. ಹಾಗೂ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014 [ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ 2011] (ಅಧಿಸೂಚನೆ ಸಂ.ಸಂವ್ಯಶಾಇ 32 ಶಾಸನ 2012, ದಿನಾಂಕ:-3.9.2012)ರ ನಿಯಮ 9 ರಂತೆ ಅಗತ್ಯ ಕ್ರಮ ವಹಿಸುವುದು. ಹಾಗೂ ಕ್ರಮವಹಿಸಿದ ಬಗ್ಗೆ ಈ ಕಛೇರಿಗೆ ವರದಿ ನೀಡಲು ತಿಳಿಸಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ನೋಡಲ್ ಅಧಿಕಾರಿಗಳು ಸಕಾಲ ಸೇವೆಗಳ ಅಧಿನಿಯಮ-2011ರ ಅಡಿಯಲ್ಲಿ ಬರುವ ಅರ್ಜಿಗಳನ್ನು ಪ್ರಥಮಾಧ್ಯತೆ ಮೇರೆಗೆ ಇತ್ಯರ್ಥಪಡಿಸಿ ಸರ್ಕಾರದ

ಪ್ರಶಂಸೆಗೆ ಪಾತ್ರರಾಗಬೇಕೆಂದು ಈ ಮೂಲಕ ತಿಳಿಸಿದೆ. ಹಾಗೂ ಕರ್ನಾಟಕ ಸರ್ಕಾರದ ನಾಗರಿಕ ಸ್ನೇಹಿ ಕಾರ್ಯಕ್ರಮವಾದ ಸಕಾಲ ಸೇವೆಗಳ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಮೂಲಕ ತಿಳಿಸಿದೆ.

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳು ಸಕಾಲ ಸೇವೆಗಳ ಬಗ್ಗೆ ಪ್ರಥಮಾಧ್ಯತೆ ಮೇರೆಗೆ ಸಕಾಲ ಅರ್ಜಿಗಳನ್ನು ಸಕಾಲದಡಿಯಲ್ಲಿ ಸ್ವೀಕರಿಸಿದ ಮತ್ತು ವಿಲೇ ಮಾಡಿದ ಬಗ್ಗೆ ಪ್ರಕರಣಗಳನ್ನೊಳಗೊಂಡಂತೆ ವಿವರವಾದ ವರದಿಯನ್ನು ಏಪ್ರಿಲ್-2018 ರಿಂದ ಅಕ್ಟೋಬರ್-2018ರ ವರೆಗಿನ ವರದಿಗಳನ್ನು ದಿನಾಂಕ:-30-11-2018ರೊಳಗೆ ತಪ್ಪದೇ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಇವರುಗಳಿಂದ ಪಡೆದು ಕ್ರೋಢೀಕರಿಸಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ತದನಂತರ ನವಂಬರ್-2018 ರಿಂದ ಮಾಹೆವಾರು ಕ್ರೋಡೀಕರಿಸಿದ ವರದಿಯನ್ನು ಪ್ರತಿ ತಿಂಗಳು 5ನೇ ತಾರೀಖಿನ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

(ಡಾ॥ ಪಿ.ಸಿ.ಜಾಫರ್ ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ಶ್ರೀಮತಿ ಬಿ.ನಿರ್ಮಲ, ಹಿರಿಯ ಸಹಾಯಕ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತರ ಭಾಷಾ ನಿರ್ದೇಶನಾಲಯ, ಕೆ.ಆರ್.ಸರ್ಕಲ್, ಬೆಂಗಳೂರು
2. ಶ್ರೀ ಶ್ರೀ ಡಾ॥ ಬಿ.ಕೆ.ಎಸ್.ವರದನ್ ಸಹ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಆಯುಕ್ತಾಲಯ, ಧಾರವಾಡ.
3. ಶ್ರೀ ಶ್ರೀ ಜಿ.ಎಂ.ವಿಜಯಕುಮಾರ್(ಹೆಚ್ಚುವರಿ ಪ್ರಭಾರ), ಸಹ ನಿರ್ದೇಶಕರು(ಆಡಳಿತ), ಕಲಬುರಗಿ ಆಯುಕ್ತಾಲಯ, ಕಲಬುರಗಿ.
4. ಶ್ರೀಮತಿ ಎಸ್. ಗೀತಾ, ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ-1, ಬೆಂಗಳೂರು.
5. ಶ್ರೀ ಪ್ರಭುಸ್ವಾಮಿ, ಸಹ ನಿರ್ದೇಶಕರು,(ಪ್ರಭಾರಿ) ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು.
6. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ತುರ್ತು ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಉಪನಿರ್ದೇಶಕರು[ಆಡಳಿತ] ಇವರ ಮುಖಾಂತರ ಅಗತ್ಯ ತುರ್ತು ಕ್ರಮಕ್ಕಾಗಿ.
8. ರಾಜ್ಯದ ಎಲ್ಲಾ ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಇವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಮುಖಾಂತರ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಪ್ರಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.